ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಮೈಲಪ್ಪನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **19.08.14**

ಈ ವಾರದ ಮುನ್ಸೂಚನೆ (ದಿನಾಂಕ **20-08-14 to 24.08.14** ವರೆಗೆ)

ನಿಯತಾಂಕಗಳು	20.08.14	21.08.14	22.08.14	23.08.14	24.08.14
ಮಳೆ (ಮಿ ಮಿ)	18	17	12	17	8
ಗರಿಷ್ಠ ಉಷ್ಣಾಂಶ(ಡಿ.ಸೆ.)	32	32	32	31	30
ಕನಿಷ್ಠ ಉಷ್ಣಾಂಶ (ಡಿ.ಸೆ.)	22	22	22	22	23
ಮೋಡ (ಪ್ರಮಾಣ)	6	7	5	6	6
ಅರ್ದ್ರತೆ ೭.೨೦ ಬೆ (ಶೇ)	91	91	91	90	91
ಅರ್ದ್ರತೆ ೨.೨೦ ಮ (ಶೇ)	63	65	64	67	60
ಗಾಳಿಯ ವೇಗ (ಕಿ.ಮಿ/ಗಂಟೆಗೆ)	7	6	6	4	4
ಗಾಳಿಯ ದಿಕ್ಕು (ಡಿಗ್ರಿ)	290	290	295	290	260

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳಲ್ಲಿ ಸಾಧಾರಣ ಮಳೆಯ ಸಂಭವವಿದೆ ಎಂದು ವರದಿಯ ಪ್ರಕಾರ ತಿಳಿದುಬರುತ್ತದೆ. ದಿನದ ಗರಿಷ್ಠ ಉಷ್ಣಾಂಶವು **30.0-32.0°C** ಮತ್ತು ಕನಿಷ್ಠ **22-23°C** ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **90-91%** ಇದ್ದು, ಮಧ್ಯಾಹ್ನ **60-67 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4-7** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಮಳೆಯ ಸಂಭವ ಇದ್ದು, ತೊಗರಿ, ರಾಗಿ, ಜೋಳ, ಮುಂತಾದ ಬೆಳೆಗಳಲ್ಲಿ ಅಂತರ ಬೇಸಾಯ ಮಾಡಿ ಕಳೆ ನಿಯಂತ್ರಣ ಮಾಡಲು ಸೂಚಿಸಲಾಗಿದೆ.
- ✓ ಬೆಳೆಗಳಿಗೆ ಗೊಬ್ಬರ ಕೊಡುವಾಗ ಮಣ್ಣಿನಲ್ಲಿ ಅದನ್ನು ಚೆನ್ನಾಗಿ ಸೇರಿಸಬೇಕು. ರೈತರು ಔಷಧಿ ಸಿಂಪಡಣೆಯನ್ನು ಮುಂದೂಡಬೇಕು
- ✓ ಹೊಲದಲ್ಲಿ ವಿಶೇಷವಾಗಿ ತರಕಾರಿ/ಹೂ ಬೆಳೆಗಳಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು.
- ✓ ಹೊಲದಲ್ಲಿ ಬಸಿಗಾಲುವೆಗಳನ್ನು ನಿರ್ಮಿಸಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಬೇಕು.

ರಾಗಿ: ಜಿ.ಪಿ.ಯು–**45,48,26,66.** ಹಂತ ಹಂತವಾಗಿ ರಾಗಿಯ ಸಸಿ ಮಡಿಗಳನ್ನು ಸಿದ್ಧ ಮಾಡಿಕೊಳ್ಳಬೇಕು.

ಈ ತಿಂಗಳಲ್ಲಿ ಬೆಳೆಯಬಹುದಾದ ಬೆಳೆಗಳು:

ಅಲಸಂದೆ: ಟಿ.ವಿ.ಎಕ್ಸ್–**944,** ಕೆ. ಬಿ.ಸಿ– **1,** ಕೆ.ಎಮ್–**5,** ಪಿ.ಕೆ.ಬಿ– **4** (ತರಕಾರಿಗಾಗಿ) **ಅವರೆ:** ಹೆಚ್,ಎ.– **3,** ಹೆಚ್,ಎ–**4.** **ಹುರುಳಿ:** ಕೆ.ಬಿ.ಹೆಚ್–**1,** ಪಿ.ಹೆಚ್.ಜಿ–**9.**

ಗುಲಾಬಿ: ಕಬ್ಬಿಣದ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಅಥವಾ ಮಲ್ಟಿಪ್ಲೆಕ್ಸ್ ನ ಲಘು ಪೋಷಕಾಂಶಗಳನ್ನು ಕೊಡಬೇಕು.

ದ್ರಾಕ್ಷಿ: ಡೌನಿ/ಬೂಜು ರೋಗವು ಕಂಡುಬಂದಲ್ಲಿ ಅಕ್ರೊಬ್ಯಾಟ್ ಅಥವಾ ಕರ್ಜೆಟ್ ಅನ್ನು ಸಿಂಪಡಿಸಿ.ದ್ರಾಕ್ಷಿಯ ಗುಣಮಟ್ಟ ಹೆಚ್ಚಿಸಲು ಸಾವಯವ ಗೊಬ್ಬರ ಹಾಗೂ ಜೀವಾಮೃತ, ಪಂಚಗಾವ್ಯ ವನ್ನು ಬಳಸಿ.

ಸಸ್ಯ ಸಂರಕ್ಷಣೆ: ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆ ರಸ ಹೀರುವ ಕೀಟಗಳು ಮಳೆ ಜೋರಾಗಿ ಬಂದರೆ ನೈಸರ್ಗಿಕವಾಗಿ ನಿಯಂತ್ರಣಕ್ಕೆ ಬರುತ್ತವೆ. ಆದ್ದರಿಂದ ಔಷಧಿ ಸಿಂಪಡಣೆಯನ್ನು ಮಾಡದಿರುವುದು ಉತ್ತಮ.

ಮಳೆ ಬಾರದೇ ಇದ್ದು , ಈ ಕೀಟಗಳ ಹಾವಳಿ ಜಾಸ್ತಿ ಇದ್ದರೆ ಆಕ್ಟ್ ಅಥವಾ ಇಮಿಡಾಕ್ಲೋಪ್ರಿಡ್ ಅನ್ನು (1ಗ್ರಾಂ/ಲೀ) ಅಥವಾ ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.

ಸಹ ಸಂಶೋಧಕರು:

ಡಿ.ಶ್ರೀಧರ್

ನೋಡಲ್ ಅಧಿಕಾರಿ:

ಎನ್.ಎ.ಜನಾರ್ಧನಗೌಡ

ಬೆಂಗಳೂರು